**ದಿನಾಂಕಃ 21/12/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: DHR ಪರ ಶ್ರೀ. BMK ವಕೀಲರಿಂದಃ**

1. ಡಿಕ್ರಿದಾರರು ನನಗೆ ಗೊತ್ತು. ಸದರಿ ಯವರು ಇದೇ ನ್ಯಾಯಾಲಯದಲ್ಲಿ ನನ್ನ ಮತ್ತು ಇತರ ಇಬ್ಬರು ವಿರುದ್ಧ ಅಸಲು ದಾವೆ ಸಂಖ್ಯೆ: 165/2016 ರ ದಾವೆಯನ್ನು ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿದೆ. ಸದರಿ ದಾವೆಯು ಡಿಕ್ರಿದಾರರ ಪರವಾಗಿ ಡಿಕ್ರಿ ಆಯಿತು. ಸ.ನಂ. 39/5 ಎ ಮತ್ತು 39/6 ರ ಪಶ್ಚಿಮ ದಿಕ್ಕಿಗೆ ನನ್ನ ಸ.ನಂ. 40/2 ಇದೆ. ಡಿಕ್ರಿದಾರರು ಸದರಿ ಜಮೀನುಗಳನ್ನು ಕಮಲಮ್ಮಾ ಕೋಂ ರಾಮೇಗೌಡ ರವರಿಂದ ಕೊಂಡುಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು ಕ್ರಯಕ್ಕೆ ಪಡೆದುಕೊಂಡ ದಿನದಿಂದಲೂ ಅಣ್ಣೇಗೌಡ ರವರು ಉಳುಮೆಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನುಗಳ ಮೇಲೆ ನನಗೆ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ. ಸದರಿ ಜಮೀನುಗಳಲ್ಲಿ ಅಣ್ಣೇಗೌಡ ರವರು ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಕಮಲಮ್ಮನ ಗಂಡ ರಾಮೇಗೌಡ ರವರು ನನಗೆ ದೊಡ್ಡಪ್ಪ ಆಗಬೇಕು ಅವರು 2011 ರಲ್ಲಿ ಮರಣವನ್ನು ಹೊಂದಿದ್ದಾರೆ. ಕಮಲಮ್ಮ ನವರು 2014 ರಲ್ಲಿ ಹುಷಾರು ತಪ್ಪಿದಾರೆ. ಅವರು ಹುಷಾರು ತಪ್ಪಿದ್ದಾಗಿನಿಂದಲೂ ನಾನೇ ಅವರ ಮನೆಯ ವ್ಯವಹಾರ ಮತ್ತು ಜಮೀನಿನ ವ್ಯವಹಾರವನ್ನು ಮಾಡತ್ತಿದ್ದೇನೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದು, ಅವರ ಮದುವೆ ಆಗಿರುತ್ತದೆ. ಕಮಲಮ್ಮ ನವರು ಹುಷಾರು ತಪ್ಪಿದ್ದಾಗ, ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿಲ್ಲ, ಆದರೆ ಅವರ ಅಳಿಯಂದಿರು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೋಡಿಸಿದ್ದಾರೆ. ಕಮಲಮ್ಮ ನವರಿಗೆ ಯಾವ ಯಾವ ಆಸ್ಪತ್ರೆಯಲ್ಲಿ ಯಾವ ಕಾರಣಕ್ಕೆ ಚಿಕಿತ್ಸೆಯನ್ನು ಕೋಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಅಮಲ್ಜಾರಿ ಅರ್ಜಿಗೆ ತಕರಾರರನ್ನು ಸಲ್ಲಿಸುವಾಗ ನಾನೇ ಮಾಹಿತಿಯನ್ನು ನೀಡಿದ್ದೇನೆ. ತಕರಾರಿನಲ್ಲಿ ಕಮಲಮ್ಮ ನವರು 2014 ರಿಂದಲೇ

ಹುಷಾರು ತಪ್ಪಿದ್ದಾರೆ ಎಂದು ತಿಳಿಸಿದ್ದೇನೆ. ನಮ್ಮ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿರುವ ಅಂಶಗಳನ್ನು ತಿಳಿದುಕೊಂಡಿದ್ದೇನೆ. ದಾವೆಯ ಡಿಕ್ರಿ ಆದ ನಂತರ ನಾವು ಅಣ್ಣೇಗೌಡ ರಿಗೆ ತೊಂದರೆಯನ್ನು ಕೊಡುತ್ತಿದ್ದೇವೆ ಎಂದು ಅಣ್ಣೇಗೌಡರು ಗ್ರಾಮದಲ್ಲಿ ಗ್ರಾಮದ ಯಜಮಾನರಿಗೆ ತಿಳಿಸಿ, ಪಂಚಾಯತಿಯನ್ನು ಸೇರಿಸಿದ್ದರು ಎಂದರೆ ಸರಿಯಲ್ಲ. ಅಣ್ಣೇಗೌಡ ರು ನನ್ನ ಪರವಾಗಿ ಡಿಕ್ರಿ ಆಗಿದೆ ವ್ಯವಸಾಯಕ್ಕೆ ಅಡ್ಡಿಪಡಿಸಬೇಡಿ ಎಂದು ಕೇಳಿದ್ದಕ್ಕೆ ನಾನು ಮತ್ತು ತೀರ್ಪುರುಣಿ ಗಳು ಅದನ್ನು ತಿಪ್ಪೇಗೆ ಎಸೆ ಎಂದು ತಿಳಿಸಿ, ನ್ಯಾಯಾಲಯದ ತೀರ್ಪಿಗೆ ಅಗೌರವವನ್ನು ತೋರಿಸಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಅಗೌರವರವನ್ನು ತೋರಿಸಿದ ನಂತರ ಅಣ್ಣೇಗೌಡರು ನಮ್ಮ ವಿರುದ್ಧ ಬೆಟ್ಟದಪುರ ಪೊಲೀಸರ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಪೊಲೀಸರು ಸಹ ನಮ್ಮನ್ನು ಕರೆಸಿ ಅಣ್ಣೇಗೌಡರ ತಂಟೆಗೆ ಹೋಗಬೇಡಿ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಅವರು ನನಗೆ ನ್ಯಾಯಾಲಯಕ್ಕೆ ಹೋಗಿ ಎಂದು ತಿಳಿಸಿದರು ಎಂದು ನುಡಿಯುತ್ತಾರೆ. ಅಣ್ಣೇಗೌಡ ರಿಗೆ ನೋಂದಾಯಿತ ಕ್ರಯ ಪತ್ರದ ಮುಖಾಂತರ ಆಸ್ತಿ ವರ್ಗಾವಣೆ ಆಗಿಲ್ಲ. ಕ್ರಯ ಪತ್ರಕ್ಕೆ ನಾನು ಆಗಲಿ ನನ್ನ ತಂದೆಯಾಗಲೀ ಸಹಿಯನ್ನು ಮಾಡಿಲ್ಲ. ಕಮಲಮ್ಮನ ಗಂಡ ರಾಮೇಗೌಡ ರವರಿಗೆ ಒಟ್ಟು 5 ಜನ ಸಹೋದರರು. ಸದರಿ 5 ಜನರು ಮರಣವನ್ನು ಹೊಂದಿರುತ್ತಾರೆ. ನನ್ನ ತಂದೆ ರವರ ಅಣ್ಣ ತಮ್ಮಂದಿರುವ ಅವರು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡು ಸುಮಾರು 40 ರಿಂದ 50 ವರ್ಷಗಳಾಗಿದೆ. ಆದರೆ ಯಾರು ಖಾತೆಯನ್ನು ಮಾಡಿಸಿಕೊಂಡಿಲ್ಲ. ಕುಟುಂಬದ ಆಸ್ತಿ ವಿಭಾಗದಲ್ಲಿ ನಮ್ಮ ತಂದೆ ನಿಂಗೇಗೌಡರಿಗೆ ಯಾವುದೇ ಭಾಗ ಬಂದಿರುವುದಿಲ್ಲ. ಸಾಕ್ಷಿಯು ಮುಂದುವರಿದು ನನ್ನ ತಂದೆ ಸ.ನಂ. 50/3 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ಖರೀದಿಸಿದ್ದರು. ನನ್ನ ತಂದೆ ವ್ಯವಸಾಯಗಾರರಾಗಿದ್ದರು. ನಮ್ಮ ಒಟ್ಟು ಕುಟುಂಬದ ಸ್ವತ್ತಾದ ಸ.ನಂ. 40/2 ರಲ್ಲಿ 7 ಗುಂಟೆ ಜಮೀನಿಗೆ ನಾವು ಉಳುಮೆಯನ್ನು ಮಾಡುತ್ತಿದ್ದೇವು.

ಕಮಲಮ್ಮ ನವರ ಗಂಡ ರಾಮೇಗೌಡ ರವರಿಗೆ ಸ.ನಂ. 39/5 ರಲ್ಲಿ 30 ಗುಂಟೆ ಜಮೀನು ಹೋಗಿರುತ್ತದೆ. ಅದನ್ನು ಬಿಟ್ಟು ಬೇರೆ ಯಾವುದೇ ಜಮೀನನ್ನು ಅವರು ಉಳುಮೆಯನ್ನು ಮಾಡುತ್ತಿರಲಿಲ್ಲ. ಹುಷಾರು ತಪ್ಪಿದ್ದಾಗಿನಿಂದಲೂ ಕಮಲಮ್ಮ ನವರು ಯಾವುದೇ ಜಮೀನನ್ನು ಉಳುಮೆ ಮಾಡುತ್ತಿಲ್ಲ. ಹುಷಾರು ತಪ್ಪುವುದಕ್ಕಿಂತ ಮುಂಚೆ ಕಮಲಮ್ಮ ನವರು ಸ.ನಂ. 39/5 ರ ಜಮೀನನ್ನು ಉಳುಮೆಯನ್ನು ಮಾಡುತ್ತಿದ್ದರು. ಸದರಿ ಜಮೀನಿನ ಚಕ್ಕುಬಂದಿಃ ಪೂರ್ವಕ್ಕೆ ಃ ಹುಚ್ಚಮ್ಮ ಮತ್ತು ಬೋರೇಗೌಡ ರವರ ಜಮೀನು, ಪಶ್ಚಿಮಕ್ಕೆಃ ಅಕ್ಕೇಗೌಡ ಮತ್ತು ಕೆಂಪಸಿದ್ದೇಗೌಡ ರವರ ಜಮೀನು, ಉತ್ತರಕ್ಕೆಃ ಅಣ್ಣೇಗೌಡ ಮತ್ತು ಅಪ್ಪೇಗೌಡ ರವರ ಜಮೀನು ಹಾಗೂ ದಕ್ಷಿಣಕ್ಕೆಃ ಅಣ್ಣೇಗೌಡ ಮತ್ತು ಸ್ಕ್ರೇಗೌಡ ರವರ ಜಮೀನು ಇರುತ್ತವೆ. ಅಣ್ಣೇಗೌಡ ರು ಉಳುಮೆ ಮಾಡುತ್ತಿರುವ 30 ಗುಂಟೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ.

2. ಅಣ್ಣೇಗೌಡರು ಅವರ ಜಮೀನಿನಲ್ಲಿ ಯಾವ ಬೇಳೆಯನ್ನು ಬೆಳೆಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು 7 ನೇ ತರಗತಿಯ ವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾವು 6 ಜನ ಅಣ್ಣ ತಮ್ಮಂದಿರುಗಳು. ನಮ್ಮ ಅಣ್ಣ ತಮ್ಮಂದಿರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಆಸ್ತಿ ವಿಚಾರಕ್ಕಾಗಿ ದಾವೆಯನ್ನು ಹೂಡಿದ್ದಾರೆ. ಅವರ ಸಮ್ಮತಿಯಿಲ್ಲದೇ ಬೇರೆಯವರಿಗೆ ಮಾರಾಟ ಮಾಡಿದ್ದೇನೆ ಅವರು ದಾವೆಯನ್ನು ಹೂಡಿದ್ದಾರೆ.

(ಮುಂದುವರೆದ ಪಾಟೀಸವಾಲನ್ನು DHR ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**